# ಖಾಲಿ ಸೈಟಲ್ಲಿ ಭರ್ಜರಿ ತರಕಾರಿ



■ ಪ.ರಾಮಕೃಷ್ಣ ಶಾಸ್ತ್ರಿ

‘ಮನೆಯ ಪಕ್ಕದಲ್ಲಿ ಖಾಲಿ ಸೈಟ್ ಇದೆಯೆಂದಾದರೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿ ಬಾಡಿಗೆಗೆ ಕೊಡುವುದಕ್ಕಿಂತ ಆ ಖಾಲಿ ಜಾಗದಲ್ಲಿ ತರಕಾರಿ ಬೆಳೆದರೆ ಬರುವ ಬಾಡಿಗೆಯ ಹತ್ತು ಪಾಲು ಹಣ ಗಳಿಸಬಹುದು...’ ಹೀಗೆಂದು ಹೇಳುವ ಹೊನ್ನಾಳಿ ಪಟ್ಟಣದ ಸುರೇಶ್ ಹೊಸಕೇರಿಯವರು ಅದನ್ನು ಮಾದರಿಯಾಗಿ ಮಾಡಿ ತೋರಿಸಿದ್ದಾರೆ. 100 ಅಡಿ ಉದ್ದ, 29 ಅಡಿ ಅಗಲದ ಸೈಟ್ ಸದಾ ಹಸಿರು ತರಕಾರಿಗಳಿಂದ ನಳನಳಿಸುತ್ತಿದೆ.

ಸುರೇಶ್ ಕೃಷಿಗೆ ಮುನ್ನ ಈ ಸೈಟ್‌ನಲ್ಲಿ ನಾಲ್ಕು ಟ್ರಾಕ್ಟರ್ ಪ್ರಮಾಣದ ಕೆರೆಯ ಗೋಡು ಮಣ್ಣು ಮತ್ತು ಅರ್ಧ ಟ್ರಾಕ್ಟರ್ ಲೋಡಿನಷ್ಟು ಸೆಗಣಿಯನ್ನು ಮಿಶ್ರ ಮಾಡಿ ಈ ನೆಲದ ತುಂಬ ಹರಡಿದ್ದಾರೆ. ಮೂರೂವರೆ ಅಡಿ ಅಂತರವಿಟ್ಟು ಸಾಲುಗಳನ್ನು ತಯಾರಿಸಿ ಎರಡು ಅಡಿಗೆ ಒಂದರಂತೆ ಬದನೆ ಗಿಡಗಳ ನಾಟಿ ಮಾಡಿದ್ದಾರೆ. ನೇರಳೆ ವರ್ಣದ ಈ ದುಂಡು ಬದನೆ ಎಣ್ಣೆಗಾಯಿ ತಯಾರಿಕೆಗೆ ಪ್ರಶಸ್ತವಾಗಿದ್ದು ತುಂಬ ಬೇಡಿಕೆಯಿದೆ.



ಕೇವಲ ಬದನೆಯಷ್ಟೇ ನಾಟಿ ಮಾಡಿದರೆ ಫಲ ಸಿಗುವವರೆಗೂ ಕಾಯಬೇಕಲ್ಲವೆ? ಸುರೇಶ್ ಗಿಡಗಳ ನಡುವಿನ ಅಂತರದ ಜಾಗದಲ್ಲಿ ಸೊಪ್ಪು ನಾಟಿ ಮಾಡಿದ್ದಾರೆ. ಒಂದೇ ತಿಂಗಳಲ್ಲಿ ಸೊಪ್ಪು ಮಾರಾಟಕ್ಕೆ ಕೈಸೇರಿ 8 ಸಾವಿರ ರೂ.ಗಳ ಆದಾಯ ಬಂದಿದೆ. ಸಾಮಾನ್ಯವಾಗಿ ಬದನೆಕಾಯಿ ಕೊಯ್ಲಿಗೆ ಮೂರು ತಿಂಗಳು ಬೇಕು. ಆದರೆ ಇವರು ರಸಗೊಬ್ಬರ ಬಳಸಿಲ್ಲ, ಕೀಟನಾಶಕ ಸಿಂಪಡಿಸಿಲ್ಲ. ಹೀಗಿದ್ದರೂ ಕೇವಲ ಸಾವಯವ ಸತ್ವವುಂಡು ಬೆಳೆದ ಗಿಡಗಳು ಅವಧಿಗೆ ಮೊದಲೇ ಹೂ ಬಿಟ್ಟು 75 ದಿನಗಳಲ್ಲಿ ಕಾಯಿ ಮಾರುಕಟ್ಟೆಗೆ ತಲುಪಿದೆ.

ಸುರೇಶ್ ಪಡೆದ ದರ ಕಿಲೋಗೆ ಕೇವಲ 5 ರೂಪಾಯಿ. ಹೀಗಿದ್ದರೂ 600 ಗಿಡಗಳಿಂದ ದೊರಕಿದ ಬದನೆಕಾಯಿಗಳ ಮಾರಾಟದಿಂದ ನಾಲ್ಕು ತಿಂಗಳಲ್ಲಿ ಬಂದ ಹಣ 17 ಸಾವಿರ ರೂ.ಗಳು. ಇನ್ನೆರಡು ತಿಂಗಳ ವರೆಗೂ ಅಷ್ಟೇ ಹಣದ ಕಾಯಿ ಸಿಗುತ್ತದೆಂದು ಅವರೆನ್ನುತ್ತಾರೆ. ಇದರ ಜೊತೆಯಲ್ಲೇ ಹೀರೆ, ಬೆಂಡೆ, ಟೊಮ್ಯಾಟೊ, ಸೌತೇಕಾಯಿ, ಹಸುರು ಮೆಣಸಿನಕಾಯಿಗಳ ಗಿಡಗಳನ್ನೂ ಬೆಳೆಸಿ ಸುಮಾರು 8 ಸಾವಿರ ರೂ. ಆದಾಯ ಗಳಿಸಿದ್ದಾರೆ. ವಾರದಲ್ಲಿ ಮನೆಗೆ ಬೇಕಾದ 500 ರೂ. ಗಳ ತರಕಾರಿ ಹಣವೂ ಇದರಿಂದಾಗಿ ಉಳಿತಾಯವಾಯಿತೆಂಬ ಲೆಕ್ಕಾಚಾರ ತೋರಿಸುತ್ತಾರೆ. ಸಾವಯವದಲ್ಲಿ ಬೆಳೆದಿರುವುದರಿಂದ ಅದಕ್ಕಾಗಿ ಜನ ಹುಡುಕಿಕೊಂಡು ಮನೆಗೆ ಬರುತ್ತಾರಂತೆ. ಈ ಬದನೆಕಾಯಿಗಳನ್ನು ಸೀಳಿ, ಒಳಗೆ ಮಸಾಲೆ ಮಿಶ್ರಣ ತುಂಬಿ ಎಣ್ಣೆಯಲ್ಲಿ ಕರಿದರೆ ಬಹು ಸ್ವಾದಿಷ್ಟವಾಗುತ್ತದೆ. ಈ ಭಾಗದಲ್ಲಿ ಅದು ಜನಪ್ರಿಯವಾದ ಖಾದ್ಯವೂ ಹೌದು.

‘ಬದನೆ ಕೃಷಿ ಮುಗಿದ ಕೂಡಲೇ ಸೊಪ್ಪು ಬೆಳೆಸುತ್ತೇನೆ. ಅದು ತುಂಬ ಬೇಡಿಕೆಯ ತರಕಾರಿ. ಲಾಭವೂ ಅಧಿಕ. ವರ್ಷದಲ್ಲಿ ಇಷ್ಟು ಸಣ್ಣ ಜಾಗದಲ್ಲಿ ಎಲ್ಲ ಖರ್ಚು ಕಳೆದು 50 ಸಾವಿರ ರೂ. ಗಳಿಸಬಲ್ಲೆ. ಹೀಗಿರುವಾಗ ಮನೆ ಕಟ್ಟಿ ಬಾಡಿಗೆಗೆ ಕೊಡುವ ಶ್ರಮವಾದರೂ ಏಕೆ’ ಎನ್ನುವ ಸುರೇಶ್ ಜನಜಾಗೃತಿ ವೇದಿಕೆಯ ಜಿಲ್ಲಾ ಅಧ್ಯಕ್ಷರಾಗಿ ಮದ್ಯಪಾನದ ವಿರುದ್ಧ ಜನರ ಕಣ್ತೆರೆಸುವ ಕೆಲಸದ ಜೊತೆಗೆ ಹತ್ತು ಹಲವು ಸಾಮಾಜಿಕ ಕೆಲಸಗಳನ್ನೂ ಮಾಡುತ್ತಿದ್ದಾರೆ. ■